1 ನೇ ಹೆಚ್ಚುವರಿ **ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿ. ನಂಃ 1029/2024**

**ಪಿರ್ಯಾದಿ ಃ** ಎಂ.ಮಹೇಶ ಬಿನ್ ಸಿದ್ದೇಗೌಡ 45 ವರ್ಷ
ವಾಸಃ ಬೆಳಗುಂದ ಗ್ರಾಮ, ಬಿಳಿಗೆರೆ ಹೋಬಳಿ , ನಂಜನಗೂಡು ತಾ.

**ವಿರುದ್ಧ**

**ಆರೋಪಿ ಃ** ಆರ್ ಮಧು, ಬಿನ್ ರಘು 36 ವರ್ಷ
ವಾಸಃ ಅಳಗಂಚಿಪುರ ಗ್ರಾಮ, ಬಿಳಿಗೆರೆ ಹೋಬಳಿ , ನಂಜನಗೂಡು ತಾ.

**ಃ ಆರೋಪಣೆ ಃ**

ಶ್ರೀಮತಿ.ಸರಿತ ಕುಮಾರಿ.ಎ.ಎಂ., 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ನಂಜನಗೂಡು ಆದ ನಾನು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆ ಃ-

ಮೇಲ್ಕಂಡ ಆರೋಪಿಯಾದ ನೀವು ಮತ್ತು ಫಿರ್ಯಾದುದಾರರು ಪರಸ್ಪರ ಪರಿಚಯಸ್ಥರಾಗಿದ್ದು, ಸದರಿ ಪರಿಚಯದ ಆಧಾರದ ಮೇಲೆ ಆರೋಪಿಯಾದ ನೀವು ದೂರುದಾರರರಿಂದ ಆಗಸ್ಟ್ -2023 ರಲ್ಲಿ ವ್ಯವಹಾರದ ಲಾರಿ, ಜೆಸಿಬಿ, ಟ್ರ್ಯಾಕ್ಟರ್ ಮತ್ತಿತರೆ ವಾಹನಗಳ ರಿಪೇರಿಗಾಗಿ ಸಾಲವನ್ನು ಕೇಳಿದ್ದು, ರೂ.5,00,000/-ಗಳನ್ನು ಪಲೆದು ಸದರಿ ಮೊಬಲಗನ್ನು ಪಾವತಿ ಮಾಡುವುದಾಗಿ ತಿಳಿಸಿರುತ್ತೀರಿ ಹಾಗೂ ಅದಕ್ಕೆ ಸಂಬಂಧಿಸಿದಂತೆ, ಆರೋಪಿಯಾದ ನೀವು ನಿಮ್ಮ ಉಳಿತಾಯ ಖಾತೆ ಹೊಂದಿರುವ ಕೆನರಾ ಬ್ಯಾಂಕ್, ನಂಜನಗೂಡು ಶಾಖೆಗೆ ಸೇರಿದ ಚೆಕ್ ನಂ.570717 ಕ್ಕೆ ರೂ.5,00,000/- ಗಳನ್ನು ದಿನಾಂಕಃ 14.08.2024 ಎಂದು ನಮೂದಿಸಿ ಫಿರ್ಯಾದುದಾರರ ಹೆಸರಿಗೆ ನೀಡಿದ್ದು, ತದನಂತರ ಪಿರ್ಯಾದುದಾರರು ಸದರಿ ಚಕ್ಕನ್ನು ನಗದೀಕರಿಸಿಕೊಳ್ಳಲು ಪಿರ್ಯಾದುದಾರರ ಉಳಿತಾಯ ಖಾತೆಯಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ , ಸುತ್ತೂರು ಶಾಖೆಯ ಬ್ಯಾಂಕಿನ ಮೂಲಕ ಹಾಜರುಪಡಿಸಿದಾಗ ಸದರಿ ಬ್ಯಾಂಕಿನವರು

ಆರೋಪಿಯಾದ ನಿಮ್ಮ ಖಾತೆಯಲ್ಲಿ "Drawers signature differs" ಎಂಬ ಬರಹದೊಂಗೆ ದಿಃ17.08.2024 ರಂದು ನಗದೀಕೃತಗೊಳ್ಳದೆ ತಿರಸ್ಕೃತಗೊಂಡಿರುತ್ತದೆ ಎಂದು ತಿಳಿಸಿರುತ್ತಾರೆ. ಅನಂತರ ಪಿರ್ಯಾದುದಾರರು ಮೇಲ್ಕಂಡ ವಿಷಯವನ್ನು ನಮೂದಿಸಿ ವಕೀಲರ ಮೂಲಕ ನಿಮಗೆ ದಿ.27.08.2024 ರಂದು ನೋಟಿಸನ್ನು ಕಳುಹಿಸಿದ್ದು, ಸದರಿ ನೋಟೀಸ್ ದಿಃ30.08.2024 ರಂದು ಜಾರಿಯಾದರು ಸಹಾ, ಈ ಸಂಬಂಧ ನೀವು ಯಾವುದೇ ಕ್ರಮ ಕೈಗೊಳ್ಳದೇ ಇದ್ದುದರಿಂದ ಆರೋಪಿಯಾದ ನೀವು ನೀವು ವರ್ಗಾವಣೆ ಲಿಖಿತ ಅಧಿನಿಯಮ ಕಲಂ 138 ಮತ್ತು 142 ರಡಿಯಲ್ಲಿ ದಂಡನೀಯವಾದ ಅಪರಾದವನ್ನು ಈ ನ್ಯಾಯಾಲಯದ ಸಜ್ಞಾಯಲ್ಲಿ ಎಸಗಿರುವಿರೆಂದು ನಿಮ್ಮ ಮೇಲೆ ಅಪಾದಿಸಲಾಗಿದೆ.

**ಪ್ರಶ್ನೆ-1 : ಈಗ ಓದಿ ಹೇಳಿದ ನಿಮ್ಮ ಮೇಲಿನ ಆಪಾದನೆಯನ್ನು ಕೇಳಿದ್ದೀರಾ ?**

**ಉತ್ತರ :**

**ಪ್ರಶ್ನೆ-2 : ಸದರೀ ಆಪಾದನೆಗಳನ್ನು ಒಪ್ಪಿಕೊಳ್ಳುವೆಯೋ ? ಅಥವಾ** ಪ್ರತಿರಕ್ಷೆ ಮಾಡಿಕೊಳ್ಳುವಿರೋ **?**
**ಉತ್ತರ :**

**(ಮೇಲ್ಕಂಡ ಆಪಾದನೆಯನ್ನು ಆರೋಪಿತನಿಗೆ ಕನ್ನಡದಲ್ಲಿ ಓದಿ ಹೇಳಿ ನಂತರ ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನೊಳಗೊಂಡಿದೆಯೆಂದು ದಿನಾಂಕ 09.10.2025 ರಂದು ತೆರೆದ ನ್ಯಾಯಾಲಯದಲ್ಲಿ ದೃಢೀಕರಿಸುತ್ತೇನೆ).**

**1ನೇ ಹೆ. ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.**
**ನಂಜನಗೂಡು**